ಮೇಲೆ ಆ ಹುಡುಗನ ತಂದೆತಾಯಿಗಳಿಗೆ ಕಿರುಕುಳ ಕೊಡುವುದನ್ನು ಬಿಟ್ಟಿದ್ದಾರೆ, ಆಲ್ಲಿಯವರೆಗೆ ಆ ತಂದೆ ತಾಯಿಗಳು ನನ್ನ ಹತ್ತಿರ ಬಂದು ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ಈ ಪತ್ರ ಆ ಹುಡುಗ ಬರೆದದ್ದಲ್ಲ ಎಂದು ಹೇಳುವುದಾದರೆ ಆತ ಸ್ಕೂಲಿನಲ್ಲಿ ಓದುವಾಗ ಬರೆಯುತ್ತಿದ್ದ ನೋಟ್ ಪುಸ್ತಕವನ್ನು ನಾನು ತಂದಿದ್ದೇನೆ. ಇದನ್ನು ನೋಡಿ ಇದನ್ನು ಪೂರ್ತಾಗಿ ಇಟ್ಟುಕೊಳ್ಳಬಹುದು. ಅವನ ಹತ್ತಿರ ಒಡವೆ ಇತ್ತು, ಹಣ ಇತ್ತು ಎಂದು ಹೇಳುತ್ತಿದ್ದಾರೆ. ಎಷ್ಟು ಹಣವನ್ನು ಹುಡುಗನಿಂದ ವಸೂಲು ಮಾಡಿದರು ? ಅರೆಸ್ಟ್ ಮಾಡಿದಾಗ ಎಷ್ಟು ಹಣ ಇತ್ತು ? ಎಫ್‌ಐಆರ್‌ನಲ್ಲಿ ಹೇಳಿರತಕ್ಕ ಹಣಕ್ಕೂ ಈ ಹಣಕ್ಕೂ ವ್ಯತ್ಯಾಸ ಇದೆ. ಇದು ಪ್ರಿಪ್ಲಾನ್ಡ್ ಮಾಡಿ ಮಾಡಿರತಕ್ಕ ಕೆಲಸ. ಪೋಲೀಸರೇ ಹುಡುಗನನ್ನು ನೇಣು ಹಾಕಿದ್ದಾರೆ ಎಂದು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಸಿಒಡಿ ಗೆ ಒಪ್ಪಿಸಬೇಕು ಮತ್ತು ಆಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು. ಜೊತೆಗೆ 20 ಸಾವಿರ ರೂಪಾಯಿಗಳ ಪರಿಹಾರವನ್ನು ಅವನ ಕುಟುಂಬದವರಿಗೆ ಕೊಡಬೇಕು ಎಂದು ಆಗ್ರಹಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ನೇಣು ಹಾಕಿಕೊಂಡ ಎಂದು ವರದಿ ಇದೆ. ಸತ್ತದ್ದು ನೇಣು ಹಾಕಿಕೊಂಡ 45 ದಿವಸದ ಮೇಲೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರ್ ಒಪೀನಿಯನ್ ರಿಸರ್ವ್ ಮಾಡಿ ಇಟ್ಟುಕೊಂಡಿದ್ದಾರೆ. ಅವರಿಂದ ವರದಿ ಬರಲಿ. ನಂತರ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಅಲ್ಲಗಳೆದಿಲ್ಲ. ಅವರ ಒಪೀನಿಯನ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಗುಂಡೂರಾಯರ ಸರ್ಕಾರ ಗುಂಡು ಸರ್ಕಾರ ಎಂದು ಹೇಳಿದ ಜನ ನೀವು. ಇವತ್ತು ಪೋಲೀಸ್ ಸ್ಟೇಷನ್‌ಗೆ ಜನ ಹೋದರೆ ವಾಪಸ್ ಬರುವುದೇ ಇಲ್ಲ. ಇಲ್ಲಿ ತಾವು ಸುಲಭವಾಗಿ ಉತ್ತರ ಕೊಡುತ್ತೀರಿ. ನೇಣು ಹಾಕಿಕೊಂಡ ಮನುಷ್ಯನಿಗೆ ಪೆಟ್ಟು ಹೇಗೆ ಬೀಳುತ್ತದೆ ? ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಮನುಷ್ಯನಿಗೆ ತಲೆಗೆ ಪೆಟ್ಟು ಏತಕ್ಕಾಯಿತು ?

ಶ್ರೀ ಬಿ. ರಾಚಯ್ಯ.—ಅವರು ಆಸ್ಪತ್ರೆಯಲ್ಲಿ ನೋಡಿ ಬಂದಿದ್ದಾರೆ, ನಾನು ಅವನನ್ನು ನೋಡಿಲ್ಲ. ನಾನು ನನಗೆ ಬಂದಿರುವ ವರದಿ ಪ್ರಕಾರ ಉತ್ತರ ಕೊಡಬೇಕಾಗುತ್ತದೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರು ಒಪೀನಿಯನ್ ಕೊಟ್ಟಿಲ್ಲ, ಅವನನ್ನು ಹೊಡೆದು ಸಾಯಿಸಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ, ಡಾಕ್ಟರಿಂದ ವರದಿ ಬರಲಿ, ಕೂಲಂಕಷವಾಗಿ ವಿಚಾರ ಮಾಡೋಣ ಎಂದು ಹೇಳಿದ್ದೇನೆ. ತಪ್ಪಿತಸ್ಥರಿಗೆ ಶಿಕ್ಷೆ ಮಾಡೋಣ. ಯಾರನ್ನೂ ರಕ್ಷಣೆ ಮಾಡುವ ಉದ್ದೇಶ ನಮಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ರಕ್ಷಣೆ ಮಾಡುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಎವಿಡೆನ್ಸ್ ಕಂಪ್ಲೀಟಾಗಿ ಮುಚ್ಚಿಡುವುದಕ್ಕೆ ಅವಕಾಶವಿದೆ. ಸಂಬಂಧಪಟ್ಟ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಮುಚ್ಚಿಡುವುದಕ್ಕೆ ಪ್ರಯತ್ನಪಡುತ್ತಾನೆ. ಭಯಭೀತಿ ಹುಟ್ಟಿಸುತ್ತಾರೆ. ಏತಕ್ಕೆಂದರೆ ಅವರು ಬಡವರು. ಆದ್ದರಿಂದ ತಕ್ಷಣ ಸಂಬಂಧಪಟ್ಟ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಸಸ್ಪೆನ್ಷನ್‌ನಲ್ಲಿಡಬೇಕು. ಪ್ರೈಮಾಫೇಸೆ ಕೇಸ್ ಇದೆ ಎಂದು ಗೊತ್ತಾದಮೇಲೆ ಸಸ್ಪೆಂಡ್‌ಮಾಡಿ, ನಂತರ ಸಿಒಡಿ. ತನಿಖೆ ಮಾಡಿ.

ಶ್ರೀ ಬಿ. ರಾಚಯ್ಯ.—ಇದನ್ನೂ ಯೋಚನೆ ಮಾಡಬೇಕು. ಮುದುಕನನ್ನು ಸೇರಿಸಿಬಿಟ್ಟು ಬೀಗ ಹಾಕಿಕೊಂಡು ಹೋಗಿದ್ದಾರಲ್ಲ ಆ ಕಡೆಯೂ ಗಮನಹರಿಸಬೇಕು.

ಶ್ರೀ ಯು. ಭೂಪತಿ.—ಸಿಒಡಿ. ತನಿಖೆ ಮಾಡಿದರೆ ಎಲ್ಲಾ ಹೊರಗೆ ಬರುತ್ತದೆ.

ಅಧ್ಯಕ್ಷರು.—ಇದು ಕಾಲ್ ಅಟೆನ್‌ಷನ್ನೋ ? ಅರ್ಧಗಂಟೆ ಚರ್ಚೆಯೋ ? ಕುಳಿತುಕೊಳ್ಳಿ. ಬಂಗಾರಪ್ಪನವರು, ಯಡಿಯೂರಪ್ಪನವರು, ವಸಂತ ಬಂಗೇರರವರು, ಶಿವನಂಜಪ್ಪನವರು, ಓಂಕಾರ ಮೂರ್ತಿಯವರು ತಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

ವಿಷಯ : ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—ಉಪನ್ಯಾಸಕರ ಸಕ್ರಮ ನೇಮಕಾತಿಯಲ್ಲಿ ವಿಳಂಬವಾದುದರಿಂದ ಹಿರಿಯ ಮತ್ತು ಕಿರಿಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಳೀಯ

ಅಭ್ಯರ್ಥಿಗಳನ್ನು ನೇಮಕ ಮಾಡಲಾಗಿದೆ. ಇವರುಗಳು ಬಹಳ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. 1983ರಿಂದ ಈಚೆಗೆ ಯಾವ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿಲ್ಲ. ಇವರುಗಳ ಸೇವೆಯನ್ನು ಸಕ್ರಮಗೊಳಿಸಲು ಸಾಧ್ಯವಾಗಿಲ್ಲ. ಆದರೆ ಇವರುಗಳನ್ನು ಮುಂದುವರಿಸಲಾಗಿದೆ, ಈ ಉಪನ್ಯಾಸಕರ ಹುದ್ದೆಗಳು ಪತ್ರಾಂಕಿತ (ಗ್ರೂಪ್ 'ಬಿ') ಹುದ್ದೆಗಳಾಗಿವೆ. ಮತ್ತು ಹೆಚ್ಚಿನ ಹೊಣೆಗಾರಿಕೆ ಹಾಗೂ ಹೆಚ್ಚಿನ ವೇತನ ಶ್ರೇಣಿಯದಾಗಿದೆ. ಈ ಹಿಂದೆ ಕಾಲಕಾಲಕ್ಕೆ ಹೊರಡಿಸಿರುವ ವಿಶೇಷ ನಿಯಮಾವಳಿಗಳಲ್ಲಿ ಗ್ರೂಪ್ 'ಸಿ' (ಮೂರನೆ ದರ್ಜೆ) ಹುದ್ದೆಗಳಿಗೆ ಸಂಬಂಧಿಸಿದ ಸ್ಥಳೀಯ ಅಭ್ಯರ್ಥಿಗಳನ್ನು ಸಕ್ರಮಗೊಳಿಸಲಾಗಿದೆ. ಕೆಸಿಎಸ್. (ವಿಶೇಷ) (ನೇಮಕಾತಿ) ನಿಯಮಾವಳಿ, 1982ರಪ್ರಕಾರ ನೇರ ನೇಮಕಾತಿಯ ಶೇಖಡ 50 ಹುದ್ದೆಗಳನ್ನು ಗ್ರೂಪ್ 'ಸಿ'ಯಲ್ಲಿ ಬರುವ ಸ್ಟೆನೊಟೈಪಿಂಡರಿ ಪದವೀಧರರನ್ನು ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲು ಈ ಆಕ್ಟ್‌ನಲ್ಲಿ ಅವಕಾಶವಿದೆ. ಆದರೆ ಗ್ರೂಪ್ 'ಬಿ' ಹುದ್ದೆಗಳಲ್ಲಿ ಅಥವಾ ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳಿಗೆ ಸ್ಥಳೀಯ ಅಭ್ಯರ್ಥಿಗಳನ್ನು ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಆದಾಗ್ಯೂ ಶೇಖಡ 50 ಹುದ್ದೆಗಳನ್ನು ಜ್ಯೂನಿಯರ್ ಕಾಲೇಜುಗಳಲ್ಲಿ ಸ್ಥಳೀಯ ಉಪನ್ಯಾಸಕರುಗಳಾಗಿ ಕೆಲಸಮಾಡುತ್ತಿರುವ ಅಭ್ಯರ್ಥಿಗಳಿಗೆ ಮೀಸಲಿಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇದರ ಹೊರತಾಗಿ ಇನ್ನೂ ಒಂದು ವಿಷಯವನ್ನು ಸ್ಥಳೀಯ ಅಭ್ಯರ್ಥಿಗಳ ವಿಚಾರವಾಗಿ ಹೇಳುತ್ತೇನೆ. ಕಿರಿಯ ಕಾಲೇಜಿನಲ್ಲಿ ಮತ್ತು ಹಿರಿಯ ಕಾಲೇಜಿನಲ್ಲಿ ಕೆಲಸ ಮಾಡುವ ಸ್ಥಳೀಯ ಅಭ್ಯರ್ಥಿಗಳು ನನ್ನನ್ನು ಭೇಟಿಯಾಗಿದ್ದರು. ಅವರ ಸಮಸ್ಯೆಯಲ್ಲೇ ನಾನು ಕಾನೂನು ಇಲಾಖೆಯ ಕಾರ್ಯದರ್ಶಿಗಳನ್ನೂ ಕರೆಸಿ ಮಾತನಾಡಿದ್ದೇನೆ. ಇವರನ್ನು ಖಾಯಂಗೊಳಿಸುವುದಕ್ಕೆ ಅವಕಾಶ ಇದ್ದರೆ ಹೇಳಿ ಅದರ ಪ್ರಕಾರ ಖಾಯಂಗೊಳಿಸೋಣ, ಇದರಲ್ಲೇನಾದರೂ ಕಾನೂನಿನ ತೊಡಕಿದೆಯೇ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು "1983ರಲ್ಲಿ ಇದೇರೀತಿ ಖಾಯಂಗೊಳಿಸಿದಾಗ ಈ ರೀತಿ ಖಾಯಂಗೊಳಿಸುವುದು ಸರಿಯಲ್ಲ ಎಂದು ಹೈಕೋರ್ಟಿನವರು ತೀರ್ಪನ್ನು ಕೊಟ್ಟರು, ಆದಾದಮೇಲೆ ಶೇಕಡ 50ರಷ್ಟು ಮೀಸಲಾತಿ ಇಡಲು ಅವಕಾಶ ಮಾಡಿಕೊಟ್ಟರು....ಎಂದು. ಇವರಿಗೂ ಕೂಡ ಶೇಕಡ 50ರಷ್ಟು ಮೀಸಲಾತಿ ಇಟ್ಟರೆ ಆಕ್ಷೇಪಣೆ ಬರುವುದಿಲ್ಲ ಎಂದು ಹೇಳಿದರು. ಅದರ ಪ್ರಕಾರ ನಮ್ಮ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ಕಿರಿಯ ಕಾಲೇಜುಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಶೇಕಡ 50ರಷ್ಟು ನೇಮಕಾತಿಯಲ್ಲಿ ಮೀಸಲಿಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದಕ್ಕೆ ರಾಜ್ಯಮಟ್ಟದ ನೇಮಕಾತಿ ಸಮಿತಿಯನ್ನು ರಚನೆ ಮಾಡಿದ್ದೇವೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮಿಷನರ್ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದೇವೆ. ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರು, ತಾಂತ್ರಿಕ ಶಿಕ್ಷಣದ ನಿರ್ದೇಶಕರು ಅದರಲ್ಲಿ ಸದಸ್ಯರಾಗಿದ್ದಾರೆ. ಆಯಾ ಸಬ್ಜೆಕ್ಟ್ ಬಂದಾಗ ಆಯಾ ಸಬ್ಜೆಕ್ಟ್ ಎಕ್ಸ್‌ಪರ್ಟ್ಸ್ ಕರೆದು ಸಂದರ್ಶನ ನಡೆಸಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ನವೆಂಬರ್ 1ನೇ ತಾರೀಖಿನೊಳಗಾಗಿ ಎಲ್ಲರನ್ನೂ ಸಂದರ್ಶನ ಮಾಡಿ ಎಷ್ಟು ಜನರಿಗೆ ಅವಕಾಶ ಕೊಡುವುದಕ್ಕೆ ಸಾಧ್ಯವೋ ಅಷ್ಟು ಜನರಿಗೆ ಅವಕಾಶ ಮಾಡಿಕೊಡುತ್ತೇವೆ. ಇದಲ್ಲದೆ ಈ ಶಿಕ್ಷಕರು 50 ಪರ್ಸೆಂಟ್ ಮೆರಿಟ್ ಪ್ರಕಾರ ಏನು ಅವಕಾಶ ಇದೆ ಅದರಲ್ಲೂ ಸ್ಪರ್ಧೆಮಾಡುವುದಕ್ಕೆ ಅವಕಾಶ ಇದೆ. ಈ ಬಗ್ಗೆ ತಮಗೆ ಅಂಕಿಅಂಶಗಳು ಬೇಕೆಂದರೆ ನಾನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕೊಡಿ.

ಶ್ರೀ ಎಂ. ರಘುಪತಿ.—ಕಿರಿಯ ಕಾಲೇಜಿನಲ್ಲಿ 1980-81ರಲ್ಲಿ 27 ಜನ, 1981-82ರಲ್ಲಿ 131 ಜನ' 1982-83ರಲ್ಲಿ 385 ಜನ ಹೀಗೆ ಒಟ್ಟು 543 ಜನ ಕಿರಿಯ ಕಾಲೇಜು ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದರಲ್ಲಿ 75 ಜನ ರಾಜೀನಾಮೆ ಕೊಟ್ಟಿದ್ದಾರೆ. ಇದರಿಂದ ಉಳಿದವರ ಸಂಖ್ಯೆ 468 ಆಯಿತು. ಹಾಗೂ ಲೋಕ ಸೇವಾ ಆಯೋಗದವರು ಏನು 400 ಜನರನ್ನು ನೇಮಕ ಮಾಡಿದರು ಅದರಲ್ಲಿ 70 ಜನ ಇವರನ್ನೂ ನೇಮಕ ಮಾಡಲಾಗಿ ಉಳಿದವರ ಸಂಖ್ಯೆ 398 ಆಯಿತು, ಇನ್ನು ಕಿರಿಯ ಕಾಲೇಜುಗಳಲ್ಲಿ 800 ಪೋಸ್ಟ್ ಖಾಲಿ ಇವೆ. ಈಗ ನಾವು ಇವರನ್ನು ನೇಮಕ ಮಾಡುವುದರ ಬಗ್ಗೆ ಪಿಎಸ್‌ಸಿ. ಬದಲಾಗಿ ಒಂದು ಸ್ಪೆಷಲ್ ಸೆಲೆಕ್ಷನ್ ಕಮಿಟಿ ಮಾಡುವುದಕ್ಕೆ ಇದ್ದೇವೆ. ಆ ಪ್ರಕಾರ 50 ಪರ್ಸೆಂಟ್ ಎಂದರೆ 400 ಜನರಿಗೆ ಅದರಲ್ಲಿ ಮೀಸಲು ಇಡಲಾಗುತ್ತದೆ. ಆದರೆ ಇವರು ಉಳಿದಿರುವುದು ಕೇವಲ 398 ಜನರು ಮಾತ್ರ. ಇದರಿಂದಾಗಿ ಹೆಚ್ಚುಕಡಿಮೆ ಎಲ್ಲಾ ಜನರಿಗೂ ಜೂನಿಯರ್ ಕಾಲೇಜ್‌ನಲ್ಲಿ ಕೆಲಸಮಾಡುವ ಅವಕಾಶ ಇರುತ್ತದೆ, ಆದರೆ ಇಲ್ಲಿ ಪ್ರಶ್ನೆ ಇರುವುದು ಪ್ರಥಮ ದರ್ಜೆ ಕಾಲೇಜುಗಳ ಬಗ್ಗೆ. ಇಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ 1978ರಲ್ಲಿ 23 ಜನ. 1979ರಲ್ಲಿ 41 ಜನ, 1980ರಲ್ಲಿ 72 ಜನ, 1981ರಲ್ಲಿ 75 ಜನ ಹಾಗೂ 1982ರಲ್ಲಿ 7 ಜನ ಹೀಗೆ ಒಟ್ಟು 218

ಜನ ಭರ್ತಿಯಾಗಿದ್ದಾರೆ. ಇವರುಗಳಲ್ಲಿ 5 ವರ್ಷಕ್ಕಿಂತಾ ಹೆಚ್ಚಾಗಿ ಕೆಲಸ ಮಾಡುತ್ತಿರುವವರು 27 ಜನ. ಅದಕ್ಕಿಂತಲೂ ಕಡಿಮೆ ಕೆಲಸದವರು 110 ಜನ. ಇವರಲ್ಲಿ 50 ಪರ್ಸೆಂಟ್ ಖಾಸಲು ಇರಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿಲ್ಲ. ಅವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತಿದೆ. ಈ ಬಗ್ಗೆ ಚರ್ಚೆ ಮಾತನಾಡಿದಕ್ಕಿಂತಹ ಕಾಲದಲ್ಲಿ ಯಾರಿಗೆ 29 ವರ್ಷಕ್ಕಿಂತಾ ವಯಸ್ಸು ದಾಟಿಲ್ಲವೋ ಆಗಿದೆ ಅವರಿಗೆ ಮೊದಲ ಆದ್ಯತೆ ಕೊಡಬೇಕು ಹಾಗೂ ಯಾರು 3 ವರ್ಷಕ್ಕಿಂತಾ ಹೆಚ್ಚು ಕೆಲಸ ಮಾಡಿ ನ್ಯಾಸಕರಾಗಿ ಮಾಡಿದ್ದಾರೆ ಅವರಿಗೂ ಪ್ರಿಫರೆನ್ಸ್ ಕೊಡಬೇಕೆಂದು 2 ಕ್ಲಾಸ್‌ನ್ನು ಆಳವಡಿಸಬೇಕೆಂದು ಇದೆ. ಆಗ ಹೆಚ್ಚು ಕಡಿಮೆ ಇವರಲ್ಲಿಯೂ ಬಹಳ ತೀಕ್ಷ್ಣ ಜನರಿಗೆ ಕೆಲಸ ಸಿಗುತ್ತವೆ. ಹಾಗೂ ಕೆಲವರು ಉಳಿದುಕೊಳ್ಳಬಹುದು. ಅವರನ್ನೂ ಸಹಾ ಕಾನೂನು ತೊಡಕು ಇಲ್ಲದಂತೆ ಖಾಯಂಗೊಳಿಸಬೇಕೆನ್ನುವುದು ಸರ್ಕಾರದ ಉದ್ದೇಶ ಇದೆ. ಅದಕ್ಕಾಗಿ ಕಾನೂನು ಇಲಾಖೆಯವರನ್ನು ಕೇಳಿದ್ದೇವೆ. ಈ ಬಗ್ಗೆ 2 ದಿನಗಳಲ್ಲಿ ತಮ್ಮ ಅಭಿಪ್ರಾಯವನ್ನು ಕೊಡುವುದಾಗಿ ಅವರು ಹೇಳಿದ್ದಾರೆ. ಹಾಗೂ ಸುಪ್ರೀಂ ಕೋರ್ಟ್ ತೀರ್ಪು ಏನಿದೆ ಅದನ್ನು ನೋಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೂ ಕಾನೂನು ಇಲಾಖೆಯ ಕಾರ್ಯದರ್ಶಿಯವರನ್ನು ಭೇಟಿಯಾಗಿ ಎಂದು ನಾನು ಸ್ಥಳೀಯ ಅಭ್ಯರ್ಥಿಗಳನ್ನು ಕೇಳಿದ್ದೆ. ಅವರೂ ಕೂಡ ಭೇಟಿ ಮಾಡಿದ್ದಾರೆಂದು ಕಾಣುತ್ತದೆ. ನಾನು ನಿನ್ನೆ ಮೊನ್ನೆ ಅವರನ್ನು ಭೇಟಿ ಆಗಿಲ್ಲ. ಮತ್ತೊಂದು ಸುತ್ತು ಬೇಕಾದರೆ ಮಾತನಾಡಿ ನವೆಂಬರ್ 1ನೇ ತಾರೀಖಿನ ಒಳಗೆ ಸಂದರ್ಶನ ನಡೆಸಿ ಕಿರಿಯ ಕಾಲೇಜುಗಳಿಗೆ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏರ್ಪಾಟು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಎಸ್, ಯಡಿಯೂರಪ್ಪ.--ಈ ಅಭ್ಯರ್ಥಿಗಳನ್ನು ನೇಮಕ ಮಾಡುವಾಗ ಯಾವರೀತಿ ನೇಮಕ ಮಾಡಿದ್ದೀರಿ ? ಇವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಪತ್ರಿಕೆಯಲ್ಲಿ ಜಾಹಿರಾತು ಮಾಡಿ, ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ವ್ಯವಸ್ಥಿತವಾಗಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೀರೆಂದು ಹೇಳುತ್ತಾರೆ. ಇವರಲ್ಲಿ ಕೆಲವರು 3 ರಿಂದ 10 ವರ್ಷಗಳವರೆಗೆ ಸರ್ವೀಸ್ ಮಾಡಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಸರ್ಕಾರಿ ಆಜ್ಞೆ ಹೊರಡಿಸಿ ಖಾಯಂ ಮಾಡುವುದರಿಂದ ಇವರ ಸರ್ವೀಸ್ ಕೌಂಟ್ ಆಗುತ್ತದೆ. ಇವರದೇನೂ ಬ್ರೇಕ್ ಆಫ್ ಸರ್ವೀಸ್ ಆಗಿಲ್ಲ. ಆದುದರಿಂದ ತಾವು ಇನ್ನಮುಂದೆ ಅಪಾಯಿಂಟ್ ಮಾಡುವಾಗ ಪದವಿ ಹೊಂದಿರುವವರನ್ನೇ ಮಾಡಿ. ಇವರೆಲ್ಲಾ ರೋಸ್ಟರ್ ಪ್ರಕಾರ ನೇಮಕ ಆಗಿದ್ದು ಇವರಿಗೆ ಸರ್ವೀಸ್ ಸಹಾ ಆಗಿದೆ. ನಿಯಮ ಅನುಸರಿಸಿ ನೇಮಕ ಮಾಡಿದ್ದರೂ ಬೇಸಿಕ್ ಪೇಗಿಂತ 10 ರೂ. ಕಡಿಮೆ ಸಂಬಳಕ್ಕೆ ಇವರನ್ನು ನೇಮಕ ಮಾಡಿಕೊಂಡಿದ್ದೀರಿ. ಈ ರೀತಿ ಸಂಬಳ ಇರುವುದರಿಂದ ಕೆಲವರು ಬಿಟ್ಟು ಹೋಗುತ್ತಾರೆ. ಆದ್ದರಿಂದ ಆಜ್ಞೆ ಹೊರಡಿಸಿ ಖಾಯಂಗೊಳಿಸಿದರೆ ಇವರ ಸರ್ವೀಸ್ ಕೌಂಟ್ ಆಗುತ್ತದೆ. ಹಾಗೂ ಯೋಗ್ಯ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಅವರನ್ನು ಆ ರೀತಿ ಖಾಯಂ ಮಾಡುವುದಕ್ಕೆ ಅವಕಾಶ ಇದ್ದರೆ ಮಾಡುವುದಕ್ಕೆ ಆಜ್ಞೆ ಮಾಡುತ್ತಿದ್ದೆ. ಅದಕ್ಕೆ ಕಾನೂನು ತೊಡಕು ಇದೆ. ಕಾನೂನು ಇಲಾಖೆಯವರು 2 ದಿವಸದಲ್ಲಿ ತಿಳಿಸುತ್ತೇವೆ ಎಂದು ಹೇಳಿದ್ದಾರೆ. ಇವತ್ತು ಬೆಳಿಗ್ಗೆ ಅವರ ಜೊತೆ ಚರ್ಚೆಮಾಡಿದ್ದೇನೆ. 2–3 ದಿವಸಗಳಲ್ಲಿ ಅಭಿಪ್ರಾಯ ಕೊಡುತ್ತೇವೆಂದು ಹೇಳಿದ್ದಾರೆ. ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಯಾವ ರೀತಿ ರೆಗ್ಯುಲರೈಸ್ ಮಾಡಬೇಕು ಎನ್ನುವುದರಲ್ಲಿ ನಮಗೂ ಆಸಕ್ತಿ ಇದೆ. ಅವರ ಮೇಲೆ ನಮಗೂ ಅನುಕಂಪ ಇದೆ. ಮಾನವೀಯ ದೃಷ್ಟಿಯಿಂದ ಅವರಿಗೆ ಸಹಾಯ ಮಾಡಬೇಕೆಂದಿದ್ದೇವೆ.

ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಅವರನ್ನು ನೇಮಕ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಮಾಡಿಲ್ಲ. ನೇಮಕ ಮಾಡುವಾಗ ಎಸ್‌ಸಿ. ಹಾಗೂ ಎಸ್‌ಟಿ. ಜನಾಂಗದವರಿಗೆ ಎಷ್ಟು ಪೋಸ್ಟ್ ನೇಮಕ ಮಾಡಬೇಕೆಂದು ಆಜ್ಞೆ ಹೊರಡಿಸಲಾಗಿತ್ತೇ ಹೊರತು ರೋಸ್ಟರ್ ಪ್ರಕಾರ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. 1977ರ ಆಜ್ಞೆಯನ್ನು ತರಿಸಿಕೊಂಡು ನಾನು ಓದಿದ್ದೇನೆ. ಆಗ ರೋಸ್ಟರ್ ಪ್ರಕಾರ ನೇಮಕ ಆಗಿರಲಿಲ್ಲ. ಆಗ ರೋಸ್ಟರ್ ಪದ್ಧತಿ ಬಂದಿರಲಿಲ್ಲವೆಂದು ಕಾಣುತ್ತದೆ. ಆದರೆ ಎಸ್‌ಸಿ. ಹಾಗೂ ಎಸ್‌ಟಿ.ಯವರಿಗೆ ಎಷ್ಟು ನೇಮಕ ಮಾಡಬೇಕೆಂದು ಹೇಳಲಾಗಿದೆ. ಆ ಪ್ರಕಾರ ನೇಮಕ ಮಾಡಿದ್ದಾರೆ. ಒಟ್ಟಾರೆ ಇವರಿಗೆ ಮಾನವೀಯ ದೃಷ್ಟಿಯಿಂದ ಸಹಾಯ ಮಾಡಬೇಕೆನ್ನುವುದು ಸರ್ಕಾರದ ಆಸೆ ಇದೆ. ಆದರೆ ನಾಳೆ ಅವರನ್ನು ಖಾಯಂ ಮಾಡುವುದಕ್ಕೆ ನಾವು ಹೈಕೋರ್ಟಿನ ವಿರುದ್ಧ ಹೋದರೆ ಅದು ಸರಿ ಹೋಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸ್ವಲ್ಪ ತಾಳ್ಮೆ ಇರಲಿ. ಅವರಿಗೆ ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ, ಇವರನ್ನು ಖಾಯಂಗೊಳಿಸಬೇಕೆನ್ನುವುದು ಮೂಲ ಭೂತವಾಗಿರತಕ್ಕ ಪ್ರಶ್ನೆ ಇದೆ. ಮಾನ್ಯ ಸಚಿವರೂ ಸಹಾ ಇದಕ್ಕೆ ವಿರುದ್ಧವಾಗಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಕಾನೂನು ಇಲಾಖೆಯ ಅಭಿಪ್ರಾಯವು ಕೂಡಾ ಇನ್ನು 2–3 ದಿವಸಗಳಲ್ಲಿ ತಿಳಿಯುವುದಾಗಿ ಹೇಳಿದ್ದಾರೆ. ಹಾಗೂ ಹೈಕೋರ್ಟಿನಿಂದ ಬಂದಿರತಕ್ಕ ತೀರ್ಪಿನ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ತಾರತಮ್ಯ ಇರಬಾರದು. ಇವರು ಕೆಲವು ವಿಷಯಗಳನ್ನು ಹೇಳಿರುವುದರಲ್ಲಿ ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಈ ತಾರತಮ್ಯ ಇರಬಾರದು ಎಂದು ಅವರು ಕೋಟ್ ಮಾಡಿ ಶ್ರೇಷ್ಟ ನ್ಯಾಯಾಲಯದ ಪ್ರಕಾರ ಖಾಯಂಮಾಡುವ ಅವಕಾಶ ರಾಜ್ಯ ಸರ್ಕಾರಕ್ಕೆ ಇದೆ ಎನ್ನುವ ಅಭಿಪ್ರಾಯವನ್ನು ಹೇಳಿದ್ದಾರೆ. ಇವರ ಸೇವೆಯ ಬಗ್ಗೆ ಯಾವ ತಕರಾರೂ ಇಲ್ಲ. ಪಿಎಸ್‌ಸಿ.ನವರು ಕೆಲವು ಅದ್ಯತೆ ಮೇಲೆ ಮಾಡಿ ಎಂದು ಅಭಿಪ್ರಾಯವನ್ನು ತಿಳಿಸಿದ್ದಾರೆ. ಇದು ಒಳ್ಳೆಯ ಅಭಿಪ್ರಾಯ. ಆದರೆ ಕೆಲವು ಜನರು ಏನು ಬಿಟ್ಟುಹೋಗುತ್ತಾರೆ ಅವರ ಬಗ್ಗೆ ಹೇಳುತ್ತೇನೆ. ಬೇರೆ ಬೇರೆ ಇಲಾಖೆಗಳಲ್ಲಿ 1972ರಲ್ಲಿ, 1973ರಲ್ಲಿ, 1977ರಲ್ಲಿ, 1981ರಲ್ಲಿ, 1983ರಲ್ಲಿ ಮತ್ತು 1984ರಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಿರತಕ್ಕ ಬಗ್ಗೆ ಸರ್ಕಾರಿ ಆಜ್ಞೆಯನ್ನೂ ಕೋಟ್ ಮಾಡಿದ್ದಾರೆ. ಇವತ್ತು ಇವರು 1040 ರೂ.ಗಳ ಕನ್ಸಾಲಿಡೇಟೆಡ್ ಪೇನಲ್ಲಿ ಕೆಲಸ ಮಾಡುತ್ತಿದ್ದರೆ ಬೇರೆಯವರು 1,500ರಿಂದ 1,800 ರೂಪಾಯಿಗಳವರೆಗೆ ಸಂಬಳ ಪಡೆಯುತ್ತಿದ್ದಾರೆ. ಆದ್ದರಿಂದ ಇವರಿಗೂ ಸಂಬಳ ಜಾಸ್ತಿಮಾಡಿ ರೆಗ್ಯುಲರೈಸ್ ಮಾಡಿ ಎಂದು ಹೇಳುತ್ತಿದ್ದೇನೆ. ಇದು ನ್ಯಾಯಬದ್ಧವಾದುದು ಎಂದು ನಾನು ಒಪ್ಪುತ್ತೇನೆ. ಬೇರೆ ಇಲಾಖೆಯಲ್ಲಿ ರೆಗ್ಯುಲರೈಸ್ ಮಾಡಲು ತೊಂದರೆ ಇಲ್ಲದಾಗಿ ನಮ್ಮಲ್ಲಿ ಏನು ತೊಂದರೆ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ.

ಶ್ರೀ ಎಂ. ರಘುಪತಿ.—ಅದರ ಬಗ್ಗೆಯೂ ವಿಚಾರಣೆ ಮಾಡಿದ್ದೇನೆ. ಕೇಸ್ ತೀರ್ಮಾನ ಆಗಿದ್ದು 1983ರಲ್ಲಿ, ಆ ನಂತರ 1984ರಲ್ಲಿ ಒಬ್ಬರೇ ಒಬ್ಬರನ್ನು ಖಾಯಂ ಮಾಡಿದ್ದೇವೆ. ಅವರು 1978 ರಲ್ಲಿ ನೇಮಕವಾಗಿದ್ದು ಹೆಲ್ತ್ ಡಿಪಾರ್ಟ್‌ಮೆಂಟಿನ ಪ್ರೀ-ಪ್ರೊಫಷನಲ್ ಕೋರ್ಸ್‌ನಲ್ಲಿ (ಮೆಡಿಕಲ್ ಕಾಲೇಜ್) ಇದ್ದು ನಮ್ಮ ಇಲಾಖೆಗೆ ವರ್ಗಾವಣೆ ಆಗಿದ್ದರು. 1984ರಲ್ಲಿ ಅವರು ಒಬ್ಬರೇ ಉಳಿದಿದ್ದು ಅವರನ್ನು ಮಾತ್ರ ರೆಗ್ಯುಲರೈಸ್ ಮಾಡಲಾಗಿದೆ. ಆ ಬಗ್ಗೆ ಸಕ್ರಮಗೊಳಿಸಿ ಅವರನ್ನು ಖಾಯಂ ಮಾಡಲಾಗಿದೆ. ಹಾಗೂ ಬೇರೆ ಯಾವುದನ್ನೂ ಮಾಡಿರುವುದಿಲ್ಲಿ. ಆದ್ದರಿಂದ ಮಾನ್ಯ ಬಂಗಾರಪ್ಪನವರು ಹೇಳಿದಂತೆ ಇದನ್ನು ಇನ್ನೊಂದುಸಾರಿ ಕಾನೂನು ಇಲಾಖೆಯ ಜೊತೆ ಮತ್ತು ನಮ್ಮ ಇಲಾಖೆಯ ಜೊತೆಯಲ್ಲಿ ಚರ್ಚೆಮಾಡಿ ಇವರ ಸೇವೆಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಎಷ್ಟು ಸಾಧ್ಯವಾಗುತ್ತದೆಂಬುದನ್ನು ನೋಡಿ ಮಾಡುತ್ತೇವೆ.

12-30 p'm.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ಸಮರ್ಪಕವಾಗಿ, ಸಮಾಧಾನಕರವಾಗಿ ಕೊಟ್ಟಿದ್ದಾರೆ. ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡುವುದರ ಬಗ್ಗೆ ಯಾವ ಅಭ್ಯಂತರವೂ ಇಲ್ಲ. ಇವರನ್ನು ಖಾಯಂ ಮಾಡುವಾಗ ಏನಾಗುತ್ತದೆ ಎಂಬುದನ್ನು ಹೇಳಬೇಕು. ನೀವು ಏನು ಮೀಸಲಾತಿ ಇಡಬೇಕು, ಅದು ಇಡದಿದ್ದರೆ ತೊಂದರೆ ಬರುವುದಿಲ್ಲವೆ ? ಒಂದುವೇಳೆ ಈ ತೊಂದರೆ ಅಡ್ಡ ಬಂದರೆ ಆಗ ಅದನ್ನು ಯಾವರೀತಿ ಬಗೆಹರಿಸುತ್ತೀರಿ? ಕೆಲವು ಸಂದರ್ಭಗಳಲ್ಲಿ ಯಾವುದೋ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಉಪಾಧ್ಯಾಯರು ಸಿಕ್ಕಲಿಲ್ಲ ವೆಂದು ಬೇರೆ ಯಾರನ್ನೋ ತೆಗೆದುಕೊಳ್ಳುತ್ತಿರುವುದು ಉಂಟು. ಸಾಮಾನ್ಯವಾಗಿ ಯಾವ ಸಬ್ಜೆಕ್ಟ್‌ನಲ್ಲಿ ಪರಿಶಿಷ್ಟ ಜಾತಿಯವರು ಸಿಕ್ಕುವುದಿಲ್ಲ ಅಂಥ ಸಬ್ಜೆಕ್ಟ್‌ಗೆ ಮಿಸಲಾತಿ ಎಂದು ಇಡುತ್ತಾರೆ. ಇದು ಸಾಮಾನ್ಯವಾಗಿ ಎಲ್ಲಾ ಕಡೆ ನಡೆಯುತ್ತಿರುವುದು ತಮಗೆ ಗೊತ್ತಿದೆ. ತಾವು ಈಗ ಈ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡುವುದಾದರೆ ರಿಸರ್ವೇಷನ್‌ನಲ್ಲಿ ಏನು ಬ್ಯಾಕ್‌ಲಾಗ್ ಆಗಿದೆ ಅದನ್ನು ತುಂಬುವುದಕ್ಕಾಗಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೀರಾ ?

ಶ್ರೀ ಎಂ. ರಘುಪತಿ.—ರೋಸ್ಟರ್ ಪದ್ಧತಿಯನ್ನು ನಾವು ಕೈಬಿಡುವುದಿಲ್ಲ. ಇದನ್ನು ಸ್ಪೆಷಲ್ ರಿಕ್ರೂಟ್‌ಮೆಂಟ್ ಕಮಿಟಿಯ ಮುಖಾಂತರ ತುಂಬಲು ಯಾವರೀತಿ ಸಾಧ್ಯ ಎನ್ನುವ ಬಗ್ಗೆ ನಮ್ಮ ಇಲಾಖೆಯ ಜೊತೆಗೆ ಮತ್ತು ಕಾನೂನು ಇಲಾಖೆಯ ಜೊತೆಯಲ್ಲಿ ಚರ್ಚೆಮಾಡಿ ನಂತರ ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.